# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 200 |
| ಸದಸ್ಯರ ಹೆಸರು | : ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 09.12.2025 |
| ಉತ್ತರಿಸುವ ಸಚಿವರು | : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಂತಾರಾಷ್ಟ್ರೀಯ ಹೂವಿನ ಹರಾಜು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;ಇದ್ದರೆ, ಯಾವ ಹಂತದಲ್ಲಿದೆ; ಈ ಯೋಜನೆಗೆ GKVK-ತೋಟಗಾರಿಕಾ ವಿಜ್ಞಾನ ವಿವಿ ಆವರಣದ ಎಷ್ಟು ಎಕರೆ ಜಾಗವನ್ನು ಮೀಸಲಿಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಅಂತಾರಾಷ್ಟ್ರೀಯ ಹೂವಿನ ಹರಾಜು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಮತ್ತು ನಿರ್ದೇಶಕರು, ತೋಟಗಾರಿಕೆ ಇಲಾಖೆ ಹಾಗೂ ಕುಲಸಚಿವರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರನ್ನೊಳಗೊಂಡಂತೆ MOU ಮಾಡಿಕೊಳ್ಳುವ ಹಂತದಲ್ಲಿರುತ್ತದೆ.<br><br>ಈ ಯೋಜನೆಗೆ GKVK ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯ ಆವರಣದಲ್ಲಿ 05 ಎಕರೆ ಜಾಗವನ್ನು ಗುರುತಿಸಲಾಗಿರುತ್ತದೆ. |
| ಆ) | ಹೂವಿನ ಮಾರುಕಟ್ಟೆ ಸ್ಥಾಪನೆಗಾಗಿ ಈ ಪ್ರದೇಶದಲ್ಲಿ ಯಾವ ಯಾವ ಜಾತಿಯ ಎಷ್ಟು ಮರಗಳನ್ನು ಕಡಿಯಲಾಗುತ್ತಿದೆ; ಇದರಿಂದ ಹಸಿರು ಹೊದಿಕೆ ಕಡಿಮೆಯಾಗುವುದಿಲ್ಲವೇ; (ಮಾಹಿತಿ ನೀಡುವುದು) | ಸದರಿ ಪ್ರದೇಶದಲ್ಲಿ ಹಲಸು, ಗೋಡಂಬಿ, ಮಾವು ಮತ್ತು ತೆಂಗಿನಕಾಯಿ ಮರಗಳಿರುತ್ತವೆ. ಅವುಗಳನ್ನು ಕಟಾವು ಮಾಡದೆ ಯಾವ ರೀತಿ ಸ್ಥಳಾಂತರ ಮಾಡಬೇಕು? ಅವುಗಳ ಸಂಖ್ಯೆ ಎಷ್ಟು? ಹಾಗೂ ಸ್ಥಳಾಂತರಿಸಲು ಅಳವಡಿಸಿಕೊಳ್ಳಬೇಕಾದ ತಂತ್ರಜ್ಞಾನದ ಮಾಹಿತಿಯನ್ನು ಒದಗಿಸುವಂತೆ ಕುಲಸಚಿವರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನ ನಗರಿ, ಬಾಗಲಕೋಟೆ ಹಾಗೂ ನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರಿಗೆ ಪತ್ರ ಬರೆಯಲಾಗಿರುತ್ತದೆ. |
| ಇ) | ಮಾರುಕಟ್ಟೆ ಸ್ಥಾಪನೆಯಿಂದ ಜೀವ ವೈವಿಧ್ಯದ ಮೇಲೆ ಆಗುವ ಪರಿಣಾಮ, ಸಾವಯವ ತ್ಯಾಜ್ಯ ವಿಲೇವಾರಿ ಸಮಸ್ಯೆ, ಸುತ್ತಲಿನ ಜನವಸತಿಗಳ ಮೇಲೆ ಉಂಟಾಗುವ ವ್ಯತಿರಿಕ್ತ ಪರಿಣಾಮ, ವಾಹನ ಸಂಚಾರ, ಜನದಟ್ಟಣೆ ಮೇಲೆ ಆಗುವ ಸಾಧಕ-ಬಾಧಕಗಳ ಅಧ್ಯಯನ ಮಾಡಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಅಧ್ಯಯನ ಮಾಡಿರುವುದಿಲ್ಲ. |

| | | |
|---|---|---|
| ಈ) | ಈಗಾಗಲೇ ಒತ್ತಡದಲ್ಲಿರುವ ಬಳ್ಳಾರಿ ರಸ್ತೆಯು ಸದರಿ ಮಾರುಕಟ್ಟೆ ಸ್ಥಾಪನೆಯಿಂದ ಇನ್ನಷ್ಟು ಒತ್ತಡಕ್ಕೆ ಒಳಗಾಗು ವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ; ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರವಾಗಿ ಯೋಜನೆ ರೂಪಿಸಲು ಇರುವ ಸಮಸ್ಯೆ ಏನು; ಇದರಿಂದ ಹೂ ದೇಶೀಯ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಸಾಗಿಸಲು ಸುಲಭವಾಗುವುದಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು) | ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹತ್ತಿರವಾಗಿ ಪರ್ಯಾಯ ಸ್ಥಳವನ್ನು ಗುರುತಿಸಿ ಹೂವಿನ ಮಾರುಕಟ್ಟೆ ಸ್ಥಾಪನೆ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಸಂಖ್ಯೆ: ಸಿಒ 274 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು